**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ**

**ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಕೆ.ಆರ್. ಸರ್ಕಲ್, ಬೆಂಗಳೂರು-560 001**

ಸಂಖ್ಯೆ: ಸಿ 7(ಇ) ಪ್ರಾಶಿಅ/ಲೋಕ್ ದೂರು01/ 2013-14 ದಿನಾಂಕ: 28-06-2013

**ಅತಿ ಜರೂರು ಮತ್ತು ಪ್ರಾಮುಖ್ಯ**

## *ಸುತ್ತೋಲೆ*

ವಿಷಯ:- ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಅಡಿಯಲ್ಲಿ ಖಾಸಗಿಅನುದಾನರಹಿತ ಶಾಲೆಗಳ ಪ್ರಾರಂಭಿಕ ತರಗತಿಯಲ್ಲಿ ಶೇಕಡ 25 ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳ ಪೋಷಕರು ತಪ್ಪು ಆದಾಯ ಪ್ರಮಾಣ ಪತ್ರಗಳನ್ನುನೀಡುತ್ತಿರುವ ಬಗ್ಗೆ,

ಉಲ್ಲೇಖ:-1. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಮತ್ತು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012

2. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ, ED 27 MAHTHI 2012,ದಿನಾಂಕ: 8 ಮೇ 2012

3. ಉಪಲೋಕಾಯುಕ್ತರ ಪತ್ರಸಂಖ್ಯೆ:ಕಂ.ಲೋಕ್/ಬಿಸಿ.ಸಿ/1237 ದಿನಾಂಕ: 18/06/2013.

****

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ರ ಸೆಕ್ಷನ್ 12 (1) (ಸಿ) ಅಡಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶೇಕಡ 25 ಮೀಸಲಾತಿ ಕೋಟಾದ ಅಡಿಯಲ್ಲಿ ದುರ್ಬಲ ವರ್ಗದ ಹಾಗೂ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಶಾಲಾ ಪ್ರವೇಶ ಪಡೆಯುವ ಸಲುವಾಗಿ ವಿದ್ಯಾರ್ಥಿಗಳ ಪೋಷಕರು ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರಿಗಳಾದ ತಹಸೀಲ್ದಾರರಿಂದ ಪಡೆದ ಜಾತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕಾಗಿರುತ್ತದೆ. ಹೀಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುವಾಗ ಸಂಬಂಧಿಸಿದ ಅಧಿಕಾರಿಗಳು ಸರಿಯಾಗಿ ಪರಿಶೀಲನೆ ಮಾಡದೇ, ಪೂರ್ವಾಪರ ಮಾಹಿತಿ ಪಡೆಯದೇ ಹೆಚ್ಚು ಆದಾಯ ಹೊಂದಿದ್ದರೂ ಕೂಡ ಮೂರೂವರೆ (3.5) ಲಕ್ಷದ ಒಳಗೆ ಆದಾಯದ ಮಿತಿಯನ್ನು ತೋರಿಸಿ ಏಕರೂಪವಾಗಿ ನೀಡಲಾಗುತ್ತಿದೆ, ಬೆಂಗಳೂರು ನಗರದಲ್ಲಿ ಹೀಗೆ ಶೇಕಡ 40 ಕ್ಕಿಂತ ಹೆಚ್ಚಿನ ಪ್ರಕರಣಗಳಲ್ಲಿ ಖೋಟಾ ಆದಾಯ ಪ್ರಮಾಣಪತ್ರಗಳನ್ನು ನೀಡಲಾಗಿದೆಯೆಂದು ಮತ್ತು ಇದರಿಂದಾಗಿ ನಿಜವಾಗಿ ಅರ್ಹರಾದ ಬಡವರು, ನಿರ್ಗತಿಕರಿಗೆ, ಕೂಲಿ ಕಾರ್ಮಿಕರ ಮಕ್ಕಳಿಗೆ ಸಿಗಬೇಕಾದ ಹಕ್ಕು ಸಿಗುತ್ತಿಲ್ಲವೆಂದೂ, ಹೆಚ್ಚಿನ ಆದಾಯ ಹೊಂದಿರುವವರು ಕಡಿಮೆ ಆದಾಯದ ಪ್ರಮಾಣ ಪತ್ರವನ್ನು ಕಂದಾಯ ಇಲಾಖೆಯ ಅಧಿಕಾರಿಗಳಿಂದ ಪಡೆದು ಆರ್.ಟಿ.ಇ ಅಡಿಯಲ್ಲಿ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಿದ್ದಾರೆ ಎಂಬುದಾಗಿಯೂ ಕರ್ನಾಟಕ ಖಾಸಗಿ ಶಾಲೆಗಳ ಜಂಟಿ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಶ್ರೀ ಎಲ್.ಆರ್. ಶಿವರಾಮೇಗೌಡರು ನೀಡಿದ ಹೇಳಿಕೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.ಸದರಿ ವರದಿಯನ್ನು ಆದರಿಸಿ ಮಾನ್ಯ ಲೋಕಾಯುಕ್ತರು ಸ್ವಯಂ ಪ್ರೇರಿತರಾಗಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಮಾನ್ಯ ಲೋಕಾಯುಕ್ತರು ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಆರು ವಾರಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 2013-14ನೇ ಸಾಲಿನಲ್ಲಿ ಆರ್.ಟಿ.ಇ. ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪೈಕಿ ಸಾರ್ವಜನಿಕರಿಂದ ಅಥವಾ ಶಾಲಾ ಆಡಳಿತ ಮಂಡಳಿಯವರಿಂದ ಸ್ವೀಕೃತವಾದ ದೂರುಗಳನ್ನು ಆಧರಿಸಿ ವಾರ್ಷಿಕ 3.5 ಲಕ್ಷಕ್ಕಿಂತ ಅಧಿಕ ಆದಾಯವನ್ನು ಹೊಂದಿದ್ದರೂ ಅದನ್ನು ಮರೆಮಾಚಿ ಕಡಿಮೆ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಮತ್ತು ಅದರ ಆಧಾರದ ಮೇಲೆ ಮೀಸಲಾತಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ನಿರ್ದಿಷ್ಟ ಪ್ರರಣಗಳ ಬಗ್ಗೆ ಪತ್ತೆ ಮಾಡಿ ಅಂತಹ ಆದಾಯ ಪ್ರಮಾಣ ಪತ್ರಗಳನ್ನು ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರಿಗಳಿಗೆ ಪರಿಶೀಲನೆಗೆ ಕಳಿಸಿ ಪರಿಶೀಲನೆಗೆ ಒಳಪಡಿಸತಕ್ಕದ್ದು. ಪರಿಶೀಲನೆಯ ನಂತರ ಯಾವುದಾದರೂ ಜಾತಿ/ಆದಾಯ ಪ್ರಮಾಣ ಪತ್ರ ನೈಜವಲ್ಲವೆಂದು ಕಂಡುಬಂದ ಪಕ್ಷದಲ್ಲಿ ಅಂತಹ ಪ್ರಮಾಣಪತ್ರವನ್ನು ಹಿಂದಕ್ಕೆ ಪಡೆದು ಖೋಟಾ ಆದಾಯ ಪ್ರಮಾಣ ಪತ್ರದ ಆಧಾರದ ಮೇಲೆ ಮೀಸಲಾತಿ ಸೀಟು ಪಡೆದ ವಿದ್ಯಾರ್ಥಿಯ ಪ್ರವೇಶವನ್ನು ಆರ್.ಟಿ.ಇ. ಮೀಸಲಾತಿ ಸೌಲಭ್ಯದಿಂದ ಹೊರಗಿಡಲಾಗಿದೆಯೆಂದು ಹಾಗೂ ಅಂತಹ ವಿದ್ಯಾರ್ಥಿಗೆ ಶುಲ್ಕ ಮರುಪಾವತಿ ಮಾಡಲಾಗುವುದಿಲ್ಲವೆಂದು ಶಾಲೆಯವರಿಗೆ ಮತ್ತು ಪೋಷಕರಿಗೆ ಸೂಚಿಸಿ ಘೋಷಣೆ ಮಾಡತಕ್ಕದ್ದು.ಆದರೆ ಅಂತಹ ವಿದ್ಯಾರ್ಥಿಯು ಶಾಲೆಯವರು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸತಕ್ಕದ್ದು. ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ 1 ರ ಪೋಷಕರಿಗೆ ಆದಾಯ ಮಿತಿ ಇರುವುದಿಲ್ಲ ಎಂಬ ಅಂಶವನ್ನು ಗಮನದಲ್ಲಿರಿಸಿಕೊಳ್ಳಲು ತಿಳಿಸಿದೆ.

ಈ ಪ್ರಕ್ರಿಯೆಯನ್ನು 4 ವಾರಗಳಲ್ಲಿ ಪೂರ್ಣಗೊಳಿಸಿ ವಿವರವಾದ ವರದಿಯನ್ನು ಈ ಕಚೇರಿಗೆ ಸಲ್ಲಿಸತಕ್ಕದ್ದು.ಮಾನ್ಯ ಲೋಕಾಯುಕ್ತಕ್ಕೆ ವರದಿ ಸಲ್ಲಿಸಬೇಕಾಗಿರುವುದರಿಂದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕಾರ್ಯವನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಸೂಚಿಸಿದೆ.ಒಂದು ವೇಳೆ ನಿಮ್ಮ ವ್ಯಾಪ್ತಿಯಲ್ಲಿ ಅಂತಹ ಯಾವುದೇ ಪ್ರಕರಣ ಇಲ್ಲದೇ ಇದ್ದರೂ ಸಹ ಶೂನ್ಯ ವರದಿಯನ್ನು ಸಲ್ಲಿಸುವುದು ಕಡ್ಡಾಯ ಎಂಬುದಾಗಿ ಈ ಮೂಲಕ ತಿಳಿಸಿದೆ.ಜಿಲ್ಲಾ ಉಪ ನಿರ್ದೇಶಕರು ಈ ಬಗ್ಗೆ ಅಗತ್ಯ ಮೇಲ್ವಿಚಾರಣೆ ನಡೆಸಿ ತ್ವರಿತವಾಗಿ ಕ್ರಮ ಜರುಗಿಸುವಂತೆ ಸೂಚಿಸಿದೆ.

**(ಎಸ್. ಆರ್.ಉಮಾಶಂಕರ್ ಭಾ.ಆ.ಸೇ.)**
**ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಇವರಿಗೆ, ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪ ನಿರ್ದೇಶಕರ ಮೂಲಕ)ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:**

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹು ಮಹಡಿಗಳ ಕಟ್ಟಡ, ಬೆಂಗಳೂರು, ಇವರ ಅವಗಾಹನೆಗಾಗಿ ಸಲ್ಲಿಸಿದೆ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮಾಹಿತಿಗಾತಿ
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು, ಮಾಹಿತಿಗಾಗಿ.
4. ಅಪರ ಆಯುಕ್ತರು ಧಾರವಾಡ ಮತ್ತು ಗುಲ್ಬರ್ಗಾ, ಮಾಹಿತಿಗಾಗಿ
5. ನಿರ್ದೇಶಕರು (ಕಾರ್ಯಕ್ರಗಳು), ಸರ್ವಶಿಕ್ಷಣ ಅಭಿಯಾನ, ನಿರ್ದೇಶಕರು ಆರ್.ಎಂ.ಎಸ್.ಎ.ಮಾಹಿತಿಗಾಗಿ
6. ನಿರ್ದೇಶಕರು ಪ್ರಾಥಮಿಕ ಶಿಕ್ಷಣ/ಪ್ರೌಢ ಶಿಕ್ಷಣ/ಸಂಶೋಧನೆ ಮತ್ತು ತರಬೇತಿ/ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶಕರು/ ನಿರ್ದೇಶಕರು ಅಪರ ಆಯುಕ್ತಾಲಯ ಧಾರವಾಡ/ಗುಲ್ಬರ್ಗಾ, ಇವರೆಲ್ಲರ ಮಾಹಿತಿಗಾಗಿ
7. ಇ–ಆಡಳಿತ ಶಾಖೆಗೆ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲು
8. ಕಚೇರಿ ಪ್ರತಿ